5) ಇತರ ಬಾಬ್ತುಗಳಿಂದ	14156.356	12007.974	15639.076	182555.090
ಒಟ್ಟು	121735.609	116562.836	101350.028	339648.473

ಸನ್ 1991-92ರ ಅಂಕಿ ಸಂಖ್ಯೆಗಳ ಲೆಕ್ಕಗಳ ಹೊಂದಾಣಿಕೆಗೆ ಒಳಪಟ್ಟಿರುತ್ತದೆ.

ಆ) ಮೇಲ್ಕಂಡ ಅವಧಿಯಲ್ಲಿ ಸಿಬ್ಬಂದಿಯ (ನಿವೃತ್ತಿ ವೇತನದಾರರನ್ನು ಹೊರ್ತು ಪಡಿಸಿ) ಸಂಬಳಕ್ಕೆ ಖರ್ಚಾದ ಹಣದ ವಿವರವು ಈ ಕೆಳಗಿನಂತಿದೆ.

1989-90	1990-91	1991-92 ಜನವರಿ 31ರ ವರೆಗೆ	ಒಟ್ಟು
(ರೂ. ಗಳಲ್ಲಿ)	(ರೂ.ಗಳಲ್ಲಿ)	(ರೂ.ಗಳಲ್ಲಿ)	(ರೂ.ಗಳಲ್ಲಿ)
6,49,80,400	6,45,37,000	4,41,83,381	17,37,00,781

ಇ) ನಿಜ. (ಆದರೆ ಅವುಗಳ ದುರಸ್ತಿ ಕೆಲಸವನ್ನು ಕೈಕೊಂಡು ಕಾರ್ಯವು ಪ್ರಗತಿಯಲ್ಲಿದ್ದು, ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಲಾಗುತ್ತಿದೆ.)

ಈ) ಸದರಿ ವಿಷಯದಲ್ಲಿ ಈ ಕೆಳಗಿನಂತೆ ಹಣ ಖರ್ಚು ಮಾಡಲಾಗಿದೆ.

ಖಾತೆ	1989-90	1990-91 (ಲ.ರೂಗಳಲ್ಲಿ)	1991-92 (ಜನವರಿ 31ರ ವರೆಗೆ) (ಲ.ರೂ.ಗಳಲ್ಲಿ)	ಒಟ್ಟು
1) ರಸ್ತೆಗಳು	48.91	54.44	54.22	157.57
2) ನೀರು ಸರಬರಾಜು ಪೈಪುಗಳಿಗಾಗಿ	24.03	33.82	21.24	79.09
ಒಟ್ಟು	72.94	88.26	75.46	236.66

ಉ) ಪ್ರಸಕ್ತ ವರ್ಷದಲ್ಲಿ ಮಹಾನಗರಪಾಲಿಕೆ ವತಿಯಿಂದ ರಸ್ತೆಗಳು, ನೀರು ಸರಬರಾಜು, ಮಾರುಕಟ್ಟೆ ಕಟ್ಟಡಗಳನ್ನು ಕಟ್ಟುವುದು, ಒಳಚರಂಡಿ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಊ) ಇದಕ್ಕಾಗಿ 360.75 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುವುದು. ಇದುವರೆವಿಗೂ 141.28 ಲಕ್ಷ ರೂಪಾಯಿಗಳು ಖರ್ಚಾಗಿದೆ.

ಅಬಕಾರಿ ಇಲಾಖೆಯಿಂದ ಬರುತ್ತಿರುವ ಆದಾಯ ಕಡಿಮೆಯಾಗುತ್ತಿರುವುದು.

376 (879) ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಅಬಕಾರಿ ಇಲಾಖೆಯಿಂದ ಕಳೆದ ಎರಡು ವರ್ಷಗಳಿಂದ (ಜನವರಿ 31, 1992 ರವರೆಗೆ) ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು?

ಆ) ಅಬಕಾರಿ ಇಲಾಖೆಗೆ ಈಗ ಬಂದಿರುವ ಆದಾಯವನ್ನು ಹಿಂದಿನ ವರ್ಷಕ್ಕೆ ಹೋಲಿಸಿದರೆ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಕಾರಣಗಳೇನು?

ಈ) ಮುಂಬರುವ ವರ್ಷಗಳಲ್ಲಿ ಅಬಕಾರಿ ಆದಾಯವನ್ನು ಹೆಚ್ಚಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಿದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ)

ವರ್ಷ	ವಸೂಲಾದ ಆದಾಯ (ಕೋಟಿ ರೂ.ಗಳಲ್ಲಿ)
1990-91	351.68
1991-92	401.65

ಆ) ಆದಾಯವು ಹಿಂದಿನ ವರ್ಷಕ್ಕಿಂತ ಸೆಚ್ಚಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಈ) ಅಬಕಾರಿ ಬಾಕಿಯನ್ನು ವಸೂಲಿ ಮಾಡುವ ಬಗ್ಗೆ ಇಲಾಖಾ ಅಧಿಕಾರಿಗಳಿಗೆ ಟಾರ್ಗೆಟ್‌ನ್ನು ನಿಗದಿಪಡಿಸಲಾಗಿದೆ. ಅಧಿಕಾರಿಗಳು ಚುರುಕು ಕ್ರಮ ಕೈಗೊಂಡಿದ್ದಾರೆ. ವರ್ಷದಿಂದ ವರ್ಷಕ್ಕೆ ಅಬಕಾರಿ ಆದಾಯವು ಹೆಚ್ಚುತ್ತಲಿದೆ.

ಮಲೆನಾಡು ಅಭಿವೃದ್ಧಿ ಮಂಡಳಿ ಸ್ಥಾಪನೆ.

377(880) ಶ್ರೀ ಪಿ.ಸಿ. ಸಿದ್ದನ ಗೌಡರ್ (ಕಲಘಟಗಿ):- ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ಮಂಡಳಿಯ ಸ್ಥಾಪನೆ ಬಗ್ಗೆ ಸಪಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು?

ಆ) ಇದಕ್ಕಾಗಿ ಮುಂಗಡ ಪತ್ರದಲ್ಲಿ ಮೀಸಲಾಗಿಟ್ಟಿರುವ ಹಣವೆಷ್ಟು? ಇದರ ಪೈಕಿ ಇದುವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

ಇ) ಮಲೆನಾಡು ಅಭಿವೃದ್ಧಿ ಮಂಡಳಿಗೆ ಯಾವ ಯಾವ ಪ್ರದೇಶಗಳು ಬರುತ್ತವೆ?

ಈ) ಈ ಮಂಡಳಿಯ ವ್ಯಾಪ್ತಿಗೆ ಬರುವ ಪ್ರದೇಶಗಳಿಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಹಣವನ್ನೇನಾದರೂ ಬಿಡುಗಡೆ ಮಾಡಲಾಗಿದೆಯೇ? ಮಾಡಿದ್ದಲ್ಲಿ, ಪ್ರತಿ ತಾಲ್ಲೂಕಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು.):-

ಅ) ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ರಚನೆಯು ಸಧ್ಯಕ್ಕೆ ಸರ್ಕಾರದ ತೀವ್ರ ಪರಿಶೀಲನೆಯಿಲ್ಲಿದೆ.

ಆ) 1991-92ನೇ ಸಾಲಿನಲ್ಲಿ ಇದಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಇದುವರೆಗೆ ಹಣವನ್ನು ಬಿಡುಗಡೆ ಮಾಡಲಾಗಿಲ್ಲ.

ಇ) ಮಲೆನಾಡು ಅಭಿವೃದ್ಧಿ ಮಂಡಳಿಗೆ ಬರುವ ಪ್ರದೇಶದ ಪಟ್ಟಿ ಲಗತ್ತಿಸಲಾಗಿದೆ.

ಈ) ಇದುವರೆಗೂ ಹಣವನ್ನು ಬಿಡುಗಡೆ ಮಾಡಲಾಗಿಲ್ಲ.